# <u>ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು</u>

ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 144/15-16

ದಿನಾಂಕ : ೩೫-10-2016.

<u>ಉಪಸ್ಥಿತರು</u> : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| <u>ಮೇಲ್ಮನವಿದಾರರು</u> | | <u>ಪ್ರತಿವಾದಿಯವರು</u> |
|---|---|---|
| ಶ್ರೀ ಡಿ. ಲಕ್ಷ್ಮಣ ಗೌಡ<br>ಬಿನ್ ಮುದರ ಗೌಡ<br>ದಿಡ್ಡ ಮನೆ, ಚಿಬಿದ್ರೆ ಗ್ರಾಮ ಮತ್ತು ಅಂಚೆ,<br>ಬೆಳ್ತಂಗಡಿ ತಾಲೂಕು ದ.ಕ.<br>(ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್) | - ಮತ್ತು - | 1. ಕಂದಾಯ ನಿರೀಕ್ಷಕರು<br>ಕೊಕ್ಕಡ ಹೋಬಳಿ,<br>ಬೆಳ್ತಂಗಡಿ ತಾಲೂಕು ದ.ಕ.<br>2. ತಹಶೀಲ್ದಾರರು<br>ಬೆಳ್ತಂಗಡಿ ತಾಲೂಕು ದ.ಕ. |

- - - - -

<u>ಪ್ರಸ್ತಾವನೆ</u> :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136(2) ರನ್ವಯ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ NCRCR: 71/98-99 ರಂತೆ ತಹಶೀಲ್ದಾರರು ನೀಡಿದ ಸಾಗುವಳಿ ಪತ್ರದ ಪ್ರಕಾರ MR No. H 19/12-13 ರಂತೆ ಖಾತೆ ದಾಖಲಿಸದೆ ಇರುವುದನ್ನು ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1ರ ಪೈಕಿ ವಿಸ್ತೀರ್ಣ 2.25 ಎಕ್ರೆ ಜಮೀನಿನ ಬಗ್ಗೆ NCRCR: 71/98-99 ರಂತೆ ದಿನಾಂಕ: 09-11-2012 ರಂದು ಸಾಗುವಳಿ ಚೀಟಿಯಂತೆ ಪಹಣಿ ದಾಖಲಿಸಲು ನೀಡಿದ ಅರ್ಜಿಯನ್ನು MRH: 19/2012-13 ದಾಖಲಿಸಿಕೊಂಡು ಆದೇಶ ಮಾಡುವ ಸಮಯ ಸಂಬಂಧಿಸಿದ ಪಹಣಿಯ ಕಲಂ 11 ರಲ್ಲಿ ಬೆಳ್ತಂಗಡಿ ತಹಶೀಲ್ದಾರರ Ref ALNDCR: 7/82-83 ರಂತೆ ಅರಣ್ಯ ಇಲಾಖೆಗೆ ವರ್ಗಾಯಿಸಿದೆ ಎಂದು ದಾಖಲಿರುವುದರಿಂದ ಪಹಣಿ ದಾಖಲು ಮಾಡಿರುವುದಿಲ್ಲ ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ವಿಳಂಬ ವಿನಾಯಿತಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 52 ರಂತೆ ಹಾಗೂ ಇಂಡಿಯನ್ ಲಿಮಿಟೇಶನ್ Act ನ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 22-12-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 29-03-2016 ರಂದು ವಿಚಾರಣೆಗೆ/ಈ ದಿನವೇ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿದಾರರು ಆಕ್ರಮಣ ಮಾಡಿರುವ ಜಮೀನನ್ನು ಮೇಲ್ಮನವಿದಾರರಿಗೆ NCRSR: 71/98-99 ರಂತೆ ಸಕ್ರಮೀಕರಿಸಿದ್ದು, ಇದು ಅರಣ್ಯ ಜಮೀನಾಗಿರುವುದಿಲ್ಲ. ಮೇಲ್ಮನವಿದಾರರು ಹಾಜರುಪಡಿಸಿದ ಮ್ಯುಟೇಶನ್ ವಹಿಯ ನಕಲು 71/83-84 ದಿನಾಂಕ: ದಿನಾಂಕ: 23-08-1983 ರಲ್ಲಿ ಚಿಬಿದ್ರೆ ಗ್ರಾಮದ ಸ.ನಂ. 70/1 ಇರುವುದಿಲ್ಲ. ಈ ದಾಖಲಾತಿ ಕೈ ತಪ್ಪಿನಿಂದ ಆಗಿರಬಹುದು.

ಮೇಲ್ಮನವಿದಾರರ ಸ್ವಾದೀನದಲ್ಲಿ ಇದ್ದ ಸ್ಥಳವನ್ನು ತನಿಖೆ ನಡೆಸಿ ಕಮಿಟಿಯ ಮುಂದೆ ಮಂಡಿಸಿ ಮಂಜೂರು ಮಾಡಿರುವುದಾಗಿದೆ. ಆದುದರಿಂದ ಪಹಣಿಯಲ್ಲಿನ ಕಲಂ 11 ರಲ್ಲಿ ಅರಣ್ಯ ಜಮೀನೆಂದು ದಾಖಲಿರುವುದನ್ನು ಅಳಿಸಿ, ಮಂಜೂರಾತಿಯಂತೆ ಪಹಣಿ ದಾಖಲಿಸುವಂತೆ ಕೋರಿ ವಾದ ಮಂಡಿಸಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರಿಗೆ ದರಖಾಸ್ತು ಮಂಜೂರು ಮಾಡುವ ಸಮಯದಲ್ಲೇ ಸ.ನಂ. 70/1 ರ ಪಹಣಿಯಲ್ಲಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದೆ ಎಂಬ ದಾಖಲಾತಿ ಇರುವುದು ಕಂಡು ಬರುತ್ತದೆ. ಆದರೂ ಈ ಜಮೀನು ಅರಣ್ಯ ಜಮೀನಲ್ಲವೆಂದು ಕಡತ ತಯಾರಿಸಲಾಗಿದೆ.ಅಕ್ರಮ-ಸಕ್ರಮ ಸಮಿತಿಯಲ್ಲಿ ಅರಣ್ಯ ಇಲಾಖೆಯ ಅಭಿಪ್ರಾಯ ಪಡೆದು ಸಾಗುವಳೀ ಚೀಟಿ ನೀಡುವ ಶರ್ತವಿಧಿಸಿದ್ದು, ಮೂಲ ಮಂಜೂರಾತಿ ಕಡತ ಪರಿಶೀಲಿಸಲಾಗಿ ಅರಣ್ಯ ಅಭಿಪ್ರಾಯ ಪಡೆದಿರುವುದು ಕಂಡು ಬರುವುದಿಲ್ಲ. ಇದರಿಂದ ಅಕ್ರಮ-ಸಕ್ರಮ ಸಮಿತಿಯ ಷರತ್ತು ಉಲ್ಲಂಘಣೆ ಆಗಿರುವುದು ಸ್ಪಷ್ಟವಾಗುತ್ತದೆ. ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1 ವಿಸ್ತೀರ್ಣ 13.41 ಎಕ್ರೆ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಆಗುದೆಯೇ? ಎಂಬ ಕುರಿತು ದಾಖಲೆಗಳನ್ನು ಪರಿಶೀಲಿಸಿ ಅರಣ್ಯ ಇಲಾಖಾ ಅಭಿಪ್ರಾಯವನ್ನು ಪಡೆದು ಪಹಣಿ ದಾಖಲಾತಿಗೆ ಕ್ರಮ ಜರಗಿಸಬಹುದಾಗಿದೆ. ಆದ್ದರಿಂದ ಪ್ರಕರಣದಲ್ಲಿ ಈ ಕೆಳಕಂಡಂತೆ ಆದೇಶ ಮಾಡಿದೆ.

## ಆದೇಶ.

ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿದೆ.

ಬೆಳ್ತಂಗಡಿ ತಹಶೀಲ್ದಾರರ ಸಂಖ್ಯೆ: ಎನ್ ಸಿಆರ್ .ಸಿಆರ್: 73/98-99(ಚಿಬಿದ್ರೆ ಗ್ರಾಮ) ದಿನಾಂಕ:09-11-2012ರ ಆದೇಶವನ್ನು ರದ್ದುಗೊಳಿಸಿದೆ.

ಬೆಳ್ತಂಗಡಿ ತಾಲೂಕು ಚಿಬಿದ್ರೆ ಗ್ರಾಮದ ಸ.ನಂ. 70/1 ವಿಸ್ತೀರ್ಣ 13.41 ಎಕ್ರೆ ಜಮೀನು ಅರಣ್ಯ ಇಲಾಖೆಗೆ ವರ್ಗಾವಣೆ ಆಗಿದೆಯೇ? ಎಂಬುದರ ಕುರಿತು ಗ್ರಾಮ ದಾಖಲೆಗಳನ್ನು ಪರಿಶೀಲಿಸಿ, ಅರಣ್ಯ ಇಲಾಖಾ ಅಭಿಪ್ರಾಯವನ್ನು ಪಡೆದು ಜಮೀನು ಮಂಜೂರಾತಿ ಹಾಗೂ ಪಹಣಿ ದಾಖಲಿಸಲು ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶಿವಯ್ಯ ಎಸ್.ಎಲ್ ., ಬೆಳ್ತಂಗಡಿ ತಾಲೂಕು ಇವರ ಮುಖಾಂತರ ಜ್ಯಾರಿ.

ಪ್ರತಿ: ಕಂದಾಯ ನಿರೀಕ್ಷಕರು, ಕೊಕ್ಕಡ ಹೋಬಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.